ರಿಪೇರಿ ಕೆಲಸ, ಅಮ್ಮನಿಗೆ ಸೀರೆ, ನನಗೆ ಸೈಕಲ್ ಏನೆಲ್ಲಾ ಕೊಳ್ಳಬಹುದು. ಎಷ್ಟೊಂದು ಕಷ್ಟಗಳ ನಿವಾರಣೆ ಆಗಬಹುದು ಎಂದು ಯೋಚಿಸುತ್ತಿರುವಂತೆಯೇ, ತಾತ ಆ ಕಟ್ಟುಗಳನ್ನು ಚೀಲದಲ್ಲಿ ಹಾಕಿ ಟ್ರಂಕ್‌ನಲ್ಲಿ ಇಡಲು ಹೇಳಿದರು. ಬೆವರುವ ಕೈಗಳಲ್ಲಿ ಹಣವನ್ನು ಮುಟ್ಟಿ ಮುಟ್ಟಿ ಒಳಗೆ ಸೇರಿಸಿದೆ. ತಾತ ನನಗೆ ಇನ್ನೊಂದು ಅಚ್ಚರಿ ಕಾದಿರಿಸಿದರು. 'ನಾಳೆ ಬೆಳಿಗ್ಗೆ ನಾವು ಕಾಶಿಗೆ ವಿಮಾನದಲ್ಲಿ ಹೋಗುತ್ತೇವೆ. ತಯ್ಯಾರಿ ಆಗಬೇಕು' ಎಂದರು. ರಘು ಸರ್‌ಗೆ ಹೇಳುವುದು ಬೇಡವೇ ಎಂದರೆ 'ಅದನ್ನೆಲ್ಲಾ ರಮೇಶ ನೋಡಿಕೊಳ್ತಾನೆ ನಡಿ' ಎಂದು ಮಲಗಲು ಹವಣಿಸಿದರು. ತಾತನ ಸಂಪೂರ್ಣ ಜವಾಬ್ದಾರಿಯನ್ನು ನನಗೆ ಒಪ್ಪಿಸಿರುವಾಗ ಅವರ ಅನುಮತಿ ಇಲ್ಲದೆ ಅವರನ್ನು ಮನೆಯಿಂದ ಹೊರಗೆ ದೂರದ ಊರಲ್ಲಿ ಹೇಗೆ ಜೋಪಾನ ಮಾಡುವುದೆಂದು ದಿಗಿಲಾಯಿತು.

ಅಂದು ರಾತ್ರಿ ತಾತ ನಿಶ್ಚಿಂತೆಯಿಂದ ಮಲಗಿದರು. ಆದರೆ ನನಗೆ ಹೇಗೆ ತಾನೇ ನಿದ್ದೆ ಬರಲು ಸಾಧ್ಯ. ಆ ನೋಟುಗಳ ದಪ್ಪ ಕಟ್ಟುಗಳ ಅಗತ್ಯ ನನಗೇ ಬಹಳಷ್ಟಿದೆ. ಅಮ್ಮನನ್ನು ಕಾಡುವ ಉಬ್ಬಸಕ್ಕೆ ಚಿಕಿತ್ಸೆ ಮಾಡಬೇಕು, ಅದಕ್ಕಾಗಿ ಅವರನ್ನು ಒಳ್ಳೆಯ ಡಾಕ್ಟರ್ ಬಳಿ ಕರೆದುಕೊಂಡು ಹೋಗಬಹುದು. ಅವಳಿಗೆ ಕನ್ನಡಕ ಕೊಡಿಸಬಹುದು. ತಂಗಿಯ ವಿದ್ಯಾಭ್ಯಾಸಕ್ಕೆ ಡೊನೇಶನ್ ಕೊಟ್ಟು ಒಳ್ಳೆಯ ಕಾಲೇಜಿಗೆ ಸೇರಿಸಬಹುದು ಎಂದು ಒದ್ದಾಡಿದೆ. ಸುಮ್ಮನೇ ಹೆಚ್ಚು ಯೋಚಿಸದೇ ರಾತ್ರೋರಾತ್ರಿ ಈ ಹಣವನ್ನು ತೆಗೆದುಕೊಂಡು ಓಡಿ ಹೋಗಿಬಿಡಲೇ ಎಂಬ ಆಲೋಚನೆ ಬಂತು. ಆದರೆ ಪೊಲೀಸು - ಜೈಲು ರಮೇಶ್ ಅಂಕಲ್ ಮುಖ... ಹೀಗೆ ಒಂದಾದ ಮೇಲೊಂದು ಕಣ್ಣ ಮುಂದೆ ಬಂದು ಕೂರತೊಡಗಿತು. ಸುಮ್ಮನೆ ತಲೆ ಮರೆಸಿಕೊಂಡು ದುಬೈಗೆ ಹೋಗಿಬಿಡಬೇಕು ಎಂದು ಆಲೋಚಿಸುವಷ್ಟರಲ್ಲಿ ತಾತ ಕೋಲಿನಿಂದ ತಿವಿಯುತ್ತಾ 'ಏಳು ಬಿ.ಬಿ.ಎಂ, ಹೊರಡಲು ತಯಾರಿ ಮಾಡಿಕೊ. ನಾವು ವಿಮಾನ ನಿಲ್ದಾಣಕ್ಕೆ ಹೋಗಲು ಸಮಯ ಆಗುತ್ತದೆ. ಇಲ್ಲಿಂದ ಬೇಗವೇ ಬಿಡಬೇಕು, ರಮೇಶ್ ಕಾರ್ ಕಳಿಸುತ್ತಾನೆ' ಎಂದಾಗ ದಡಬಡಿಸಿ ಎದ್ದು ಆಂಜನೇಯನಿಗೆ ತಪ್ಪು ಕಾಣಿಕೆ ಹಾಕಬೇಕು, ಚಂಚಲ ಮನಸ್ಸನ್ನು ಹದ್ದು ಬಸ್ತಿನಲ್ಲಿ ಇಡಬೇಕು ಎಂದುಕೊಂಡೆ.

ತಾತನ ತಲೆಯಲ್ಲಿ ಏನು ಓಡುತ್ತಿದೆ ಎಂದು ಊಹಿಸುವಷ್ಟರಲ್ಲಿ, ನಮ್ಮ ತಕ್ಷಣದ ಖರ್ಚಿಗೆಂದು ತಾತ ಒಂದು ನೋಟಿನ ಕಟ್ಟನ್ನು ನನ್ನ ಕೈಗೇ ಹಾಕಿಬಿಟ್ಟರು. ಅಷ್ಟೊಂದು ಹಣವನ್ನು ಹತ್ತಿರದಿಂದ ಕಂಡಾಗ, ಕೈತುಂಬಾ ಹಣ ಅಂದರೆ ಇದೇ ಎಂದು ಅನಿಸಿತು. 'ಜಾಗ್ರತೆ' ಎಂದು ತಾತ ಎಚ್ಚರಿಸಿದಾಗ, ಕಿವಿಯ ಮೇಲೆ ತಮಟೆ ಬಾರಿಸಿದಂತಾಯಿತು. 'ಎಷ್ಟಿದೆ ಇದರಲ್ಲಿ ತಾತ?' ಎಂಬ ಪ್ರಶ್ನೆಗೆ 'ನಾವು ಕೂತು ತಿನ್ನಲು ಇಷ್ಟು ಸಾಕು, ಉಳಿಸೋಣ' ಎಂದರು.

ವಿಮಾನದಲ್ಲಿ ಹಾರುವುದೇ ಒಂದು ಕನಸಿನಂತಹ ಅನುಭವವವಾದರೆ, ಕಾಶಿಯಲ್ಲಿ ಕಾಲಿಡುವುದು ಮತ್ತೊಂದು ಕನಸು. ತಾತನ ಮುಖದಲ್ಲಿ ಎಲ್ಲಿಲ್ಲದ ಹುರುಪು. 'ಕಾಶಿಗೆ ಬಂದೆವ್ರೋ ಇಲ್ಲ ಬೇರೆ ದೇಶಕ್ಕೆ ಕರಕೊಂಡು ಬಂದೆಯೇನೋ ಬಿಬಿಎಂ. ನಾನು ನೋಡಿರುವ ಕಾಶಿಗೆ ರೈಲಿನಲ್ಲಿ ಮಾತ್ರ ಹೋಗಲು ಸಾಧ್ಯವಾಗಿತ್ತು. ಈ ವಿಮಾನದ ಕಾಶಿಯೇ ಬೇರೆ ರೀತಿ ಇದೆ, ನಡಿ ನೋಡುವ' ಎನ್ನುತ್ತಾ ವಿಳಾಸದ ಚೀಟಿಯನ್ನು ನನ್ನ ಕೈಗಿತ್ತರು.

ಹೌದು, ಕಾಶಿಯ ಕೌತುಕ ನನಗಂತೂ ಹೇಳತೀರದು. ನಮ್ಮ ಓಣಿಯ ಹುಡುಗನೊಬ್ಬ ಸೈಕಲ್‌ನಲ್ಲಿ ಕಾಶಿಗೆ 14 ದಿನಗಳಲ್ಲಿ ಹೋಗಿ ಮುಟ್ಟಿದ್ದ. ಬರುವಾಗ ಸೈಕಲ್ ಮಾರಿ, ರೈಲಿನಲ್ಲಿ ಬಂದುಬಿಟ್ಟಿದ್ದ. ಅಂದಿನಿಂದ ಕಾಶಿಯೆಂಬ ನಿಗೂಢ ತಾಣ ನನ್ನ ಮನದಾಳದಲ್ಲೆಲ್ಲೋ ಅಡಗಿತ್ತು.

ಕಾವಿ ಬಣ್ಣದ ವೇಷಧಾರಿಗಳ ಸಮೂಹ, ಎಷ್ಟೊಂದು ಬಗೆಯ ವೇಷ ಭೂಷಣಗಳ ಗುಂಪು ಗುಂಪು ಜನ, ಹಿಂದೆಂದೂ ನೋಡದ ಫಿರಂಗಿ ಜನರ ದಂಡು, ಎದುರಿಗೆಂದೂ ನೋಡದ ಸೀಳುಗಣ್ಣಿನ ಚೀನೀಯರು, ಸಾರೋಟು ಸವಾರರು, ಕಣ್ಣುಕುಕ್ಕುವ ದೀಪಾಲಂಕಾರದ ತೋರಣಗಳು ನಮ್ಮನ್ನು ಎದುರುಗೊಂಡವು. ಧ್ವನಿವರ್ಧಕಗಳಿಂದ ಜೋರಾಗಿ ಭಜನೆಗಳು ಕೇಳಿಬರುತ್ತಿದ್ದವು. ಟ್ಯಾಕ್ಸಿಯಲ್ಲಿ ಕುಳಿತು ಹೋಗುವಾಗ ಸಿನಿಮಾದ ನಾಯಕ ನಟನಂತೆ ಭಾಸವಾಯಿತು.

* * *

ಸಂಬಂಧಿಕರ ಹೆಸರು, ವಿಳಾಸ, ಸಂಪರ್ಕ ಮಾಡುವ ದೂರವಾಣಿ ಅಂಕೆಗಳು, ಎಲ್ಲವನ್ನೂ ಬರೆದು ಕೊಡುತ್ತಿದ್ದಾಗ ಅವರು ತಾತನಿಗೆ ಹೇಳುತ್ತಿದ್ದ ಮಾತುಗಳು ಕಿವಿಮೇಲೆ ಬಿತ್ತು. 'ಈ ಆಶ್ರಮಕ್ಕೆ ಸ್ವ-